# 'ಕಾಮಿಡಿ ನಂಬಿ ಬದುಕುವುದು ಕಷ್ಟ




ನಗೆದಿನ ವಿಶೇಷ

◆ **'ಕಾಮಿಡಿ ಕಿಲಾಡಿ' ನಂತರ ಏನು ಮಾಡುತ್ತಿದ್ದೀರಿ?**

ತುಳು ರಂಗಭೂಮಿಯ ಒಡನಾಟ ನನಗೆ ನಟನೆಯನ್ನೇ ಬದುಕನ್ನಾಗಿ ಬದಲಿಸಿತು. ಸುಮಾರು 15 ವರ್ಷಗಳಿಂದ ನಾಟಕಗಳನ್ನು ಮಾಡುತ್ತಾ ಬಂದಿದ್ದೇನೆ. ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದೇನೆ. ನಂತರ ಕನ್ನಡ ಟೀವಿ ವಾಹಿನಿಗೆ ಬರಬೇಕು ಎನ್ನುವ ನನ್ನ ಮೊದಲ ಯತ್ನ ಕೈಗೂಡಲಿಲ್ಲ. ಇದರ ಸಹವಾಸ ಬೇಡ ಎಂದುಕೊಂಡಿದ್ದವಳಿಗೆ ಝೀ ಕನ್ನಡದ 'ಕಾಮಿಡಿ ಕಿಲಾಡಿ'ಯಲ್ಲಿ ಅವಕಾಶ ಕೈ ಬೀಸಿ ಕರೆಯಿತು. ಈಚೆಗೆ 'ಕೃಷ್ಣಂ ಪ್ರಣಯ ಸಖಿ' ಸಿನಿಮಾ ಮಾಡಿದ್ದೇನೆ. ಈಗ ದುಬೈನಲ್ಲಿ ಕೆಲಸ ಮಾಡುತ್ತಾ, ಚೆನ್ನಾಗಿದ್ದೇನೆ. ಯಾವುದಾದರೂ ಚಿತ್ರೀಕರಣ ಇದ್ದರೆ ಕರ್ನಾಟಕಕ್ಕೆ ಬರುತ್ತೇನೆ.

◆ **ರಂಗಭೂಮಿಗೆ ಬರಬೇಕು ಎನ್ನುವ ಆಸೆ ಇದ್ದವರಿಗೆ ಅಲ್ಲಿನ ಬದುಕು ಹೇಗೆ?**

ರಂಗಭೂಮಿ ಎಲ್ಲರನ್ನೂ ಕರೆಯುವುದಿಲ್ಲ. ನೂರು ಜನ ಬಂದರೆ, ನಿಷ್ಠೆಯಿದ್ದವರು ಮಾತ್ರ ಅಲ್ಲಿ ಬದುಕು ಕಟ್ಟಿಕೊಳ್ಳುತ್ತಾರೆ. ಅಂದರೆ ರಂಗಭೂಮಿಗೆ ಗೌರವ ಕೊಡಬೇಕು, ಅದನ್ನು ಪ್ರೀತಿಸಬೇಕು. ಅಲ್ಲಿ ಏನೋ ಸಂಭಾವನೆ ಸಿಗುತ್ತೆ ಎಂದು ನಟಿಸುವುದು ಕಲಾವಿದನ ಲಕ್ಷಣ ಅಲ್ಲ. ಯಾವುದೇ ವೃತ್ತಿಯಾಗಿರಬಹುದು. ಅದನ್ನು ಎಷ್ಟು ಪ್ರೀತಿಸುತ್ತೇವೋ ಅಷ್ಟು ಗಳಿಸಲು ಸಾಧ್ಯ. ಕೀರ್ತಿ, ಸಂಪತ್ತನ್ನೆಲ್ಲ ಸಂಪಾದಿಸಬೇಕು ಅಂದರೆ ಅದನ್ನು ನಾವು ಪ್ರೀತಿಸಬೇಕು. ಎಲ್ಲರನ್ನೂ ಪ್ರೀತಿಸುವ ತಾಕತ್ತು ರಂಗಭೂಮಿಗೆ ಇದೆ. ಎಷ್ಟೇ ಕಲಿತಿದ್ದರೂ ರಂಗಭೂಮಿ ಬದುಕಿನ ನಿಜ ಸ್ವರೂಪವನ್ನು ತಿಳಿಸುತ್ತದೆ. ಅದು ವಾಸ್ತವಕ್ಕೆ ಮಿಡಿಯುತ್ತದೆ. ಹಿರಿಯ ಕಲಾವಿದರು ಹೇಗೇ ಇದ್ದರೂ ಅವರನ್ನು ಗೌರವದಿಂದ ಕಾಣಬೇಕು ಎಂಬುದನ್ನು ಅದು ಕಲಿಸುತ್ತದೆ. ಯಾರಾದರೂ ತಪ್ಪನ್ನು ಗುರುತಿಸಿದರೆ, 'ಅದಾ? ನನಗೆ ಗೊತ್ತು. ಅಲ್ಲಿ ಕೋರ್ಸ್ ಮುಗಿಸಿ ಬಂದಿದ್ದೇನೆ' ಎನ್ನುವ ಅಹಂ ತೋರಿಸಬಾರದು. 'ಆಯ್ತು, ಸರಿ ಮಾಡ್ತೀನಿ' ಎನ್ನುವ ವಿನಯವನ್ನು ರೂಢಿಸಿಕೊಂಡರೆ ಉತ್ತಮ ಕಲಾವಿದ ಆಗಬಹುದು. ಅಂತಹವನು ಮಾತ್ರ ಕಲ್ಪನೆಗೂ ಮೀರಿ ಬೆಳೆಯುತ್ತಾನೆ. ಕಲಾವಿದನಿಗೆ ಬೇಕಾಗಿರುವುದು ತಾಳ್ಮೆ, ಸಮಯಪ್ರಜ್ಞೆ, ಮತ್ತೊಬ್ಬರನ್ನು ಗೌರವಿಸುವ ಗುಣ.

ನನ್ನ ಹತ್ತನೇ ವರ್ಷದಿಂದ ನಾಟಕದಲ್ಲಿ ಅಭಿನಯಿಸಲು ಶುರುಮಾಡಿದೆ. ಇದ್ದಕ್ಕಿದ್ದಂತೆ ಒಮ್ಮೆ ಕಾಮಿಡಿ ಪಾತ್ರಕ್ಕೆ ಅವಕಾಶ ಬಂತು. ಸಹಜವಾಗಿ ಹಿಂಜರಿಕೆಯಿಂದ 'ಬೇಡ, ಆಗಲ್ಲ' ಅಂದೆ. ಹಿರಿಯರ ಒತ್ತಾಯಕ್ಕೆ ಮಣಿದು ಒಪ್ಪಿದೆ. ತುಳು ನಾಟಕಗಳು ಮಲೆಯಾಳಂ ಸಿನಿಮಾದಂತೆ ಸರಳ ಮತ್ತು ನೈಜವಾಗಿ ಬರುತ್ತವೆ.

◆ **ನಿಮ್ಮ ಹೆಸರಿನ ವಿಶೇಷವೇನು?**

ನನ್ನ ಅಜ್ಜಿ ಇಟ್ಟಿರುವ ಹೆಸರು. ಅದಕ್ಕೆ ಸ್ಪಷ್ಟ ಕಾರಣ ಹೀಗೇ ಎಂದು ವಿವರಿಸಲು ವಿಶೇಷ ಏನೂ ಇಲ್ಲ. ಬಹುಶಃ ಅವರಿಗೆ ರಾಣಿ ಅಂತ ಹೆಸರು ಇಡಬೇಕಿತ್ತು ಅಂತ ಕಾಣುತ್ತೆ. ನಾನು ಪಿಂಕ್ ಆಗಿ ಕಂಡಿದ್ದರಿಂದ ಆ ಹೆಸರು ಇಟ್ಟಿದ್ದಾರೆ. ನಾನು ಹುಟ್ಟಿದಾಗ ನಮ್ಮ ಅಜ್ಜಿಯೇ ನಮ್ಮ ಅಮ್ಮನ ಮನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

◆ **ಈಗ ವೃತ್ತಿ ಬದಲಿಸಿದ್ದು ಏಕೆ?**

ಮನೆಯ ಜವಾಬ್ದಾರಿ ನನ್ನ ಹೆಗಲಿಗೆ ಬಂದಿದೆ. ಬಾಡಿಗೆ, ತಂದೆಯ ಔಷಧ, ನನ್ನ ಮಗುವಿನ ಶಿಕ್ಷಣದ ಖರ್ಚು ವೆಚ್ಚಕ್ಕೆ ನಾನೇ ಸಂಪಾದಿಸಬೇಕು. ವರ್ಷಗಟ್ಟಲೆ ಕಾದರೂ ಹೇಳುವಂತಹ ಪಾತ್ರ ಸಿಗಲಿಲ್ಲ. ಕೆಲಸ ಇಲ್ಲದೆ ಖಿನ್ನತೆಗೆ ಒಳಗಾಗಿದ್ದೆ. ವಿಪರೀತ ಸ್ಪರ್ಧೆ ಇರುವುದರಿಂದ ಅವಕಾಶ ಸಿಕ್ಕೇ ಸಿಗುತ್ತದೆ ಎನ್ನುವ ಭರವಸೆ ಇಲ್ಲ. ಬೆಂಗಳೂರಿಗೆ ಬಂದು ನೆಲೆಸಿದ ಮೇಲೆ ನಿತ್ಯವೂ ಖರ್ಚು. ರಂಗ ಕಾರ್ಯಕ್ರಮಗಳನ್ನು ನೀಡಲು ಮುಂದಾದರೆ, ಶಿವರಾತ್ರಿ, ಗಣೇಶ ಚತುರ್ಥಿ, ದಸರಾ, ಹೀಗೆ ವರ್ಷದಲ್ಲಿ ಮೂರು ನಾಲ್ಕು ಕಾರ್ಯಕ್ರಮಗಳ ಸುಗ್ಗಿ ಕಾಲ ನಂಬಿದರೆ ಜೀವನ ನಡೆಸುವುದು ಕಷ್ಟ. ಕಾಮಿಡಿಯಿಂದಲೇ ಹೊಟ್ಟೆ ತುಂಬಿಸಿಕೊಳ್ಳುವ ಯಾವ ಭರವಸೆಯೂ ಇಲ್ಲ. ಹಾಗಾಗಿ ಕೆಲಸ ಮಾಡುವುದು ಅನಿವಾರ್ಯವಾಯಿತು.

◆ **ನೋವಿನಲ್ಲೂ ನಗಿಸುತ್ತೀರಿ. ಅದು ಹೇಗೆ?**

ಅದುವೇ ರಂಗಭೂಮಿ. ನಮ್ಮ ಮನೆಯಲ್ಲಿ ಒಂದು ಸಾವಿದ್ದರೂ ರಂಗದ ಮೇಲೆ ಬಂದರೆ ನಾನು ಒಬ್ಬ ಕಲಾವಿದೆ. ಪ್ರೇಕ್ಷಕನಿಗೆ ನಗಿಸಬೇಕು, ಅದು ನನ್ನ ಬದ್ಧತೆ, ನನಗೆ ಅಷ್ಟೇ ಮುಖ್ಯ ಆಗುತ್ತದೆ. ಅಂತಹ ನೈತಿಕ ಮೌಲ್ಯ ರಂಗಭೂಮಿ ಕಲಿಸುತ್ತದೆ. ಅಂತೆಯೇ ನಮ್ಮ ಬದುಕಿಗೆ ಆ ಶಕ್ತಿಯನ್ನೂ ತುಂಬುತ್ತದೆ. ವೈಯಕ್ತಿಕವಾಗಿ ಎಷ್ಟೇ ನೋವು, ಬೇಸರ ಇದ್ದರೂ ಅದನ್ನು ರಂಗಭೂಮಿ ಮರೆಸುತ್ತದೆ. ನಾವು ಮರೆಯದಿದ್ದರೆ ನಮ್ಮ ಕೆಲಸಕ್ಕೆ, ಅದೂ ರಂಗಭೂಮಿಗೆ ಮೋಸ ಮಾಡಿದಂತೆ ಆಗುತ್ತದೆ. ಎಲ್ಲ ಕಲಾವಿದರಿಗೂ ವೇದಿಕೆಯೇ ದೇವರು. ಅದನ್ನು ನಾವು ಗೌರವಿಸಲೇಬೇಕು. ಹಾಗಾಗಿ ಅದರ ಅಗತ್ಯಕ್ಕೆ ನಮ್ಮ ನೋವುಂಡು ಕಲೆಯನ್ನು ಪ್ರದರ್ಶನ ಮಾಡುತ್ತೇವೆ ಅಷ್ಟೇ.

◆ **ತೆಳ್ಳಗೆ ಬೆಳ್ಳಗೆ ಇದ್ದರೆ ಮಾತ್ರ ನಾಯಕಿ ಎನ್ನುವುದು ಬಾಡಿ ಶೇಮಿಂಗ್ ಅಲ್ವಾ?**

ನನ್ನನ್ನು ನೋಡಿ ನಕ್ಕರೆ ನಾನೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ನಾನು ಮಾಡಬೇಕಾದ ಕೆಲಸ ನನ್ನಿಂದ ಸಾಧ್ಯ ಆಗದಿದ್ದರೆ ಮಾತ್ರ ನನಗೆ ಬೇಸರ ಆಗುತ್ತದೆ. ಯಾರು ಏನೇ ಟೀಕೆಗಳನ್ನು ಮಾಡಿದರೂ ಕುಗ್ಗುವುದಿಲ್ಲ. ನಾಯಕಿಯ ವಿಷಯದಲ್ಲಿ ಬಣ್ಣ, ಆಕಾರ ಹೆಚ್ಚು ಮುಖ್ಯ ಆಗುತ್ತದೆ. ನಾನು ದಪ್ಪ ಇದ್ದೇನೆ. ಅದರ ಅನುಭವವೂ ಆಗಿದೆ. ಪ್ರೇಕ್ಷಕ ಹಾಗೆ ಬಯಸುತ್ತಾನೋ ಇಲ್ಲವೋ ಆ ರೀತಿಯ ಒಂದು ನಂಬಿಕೆಯಂತೂ ಇದೆ. ನಾನು ದಪ್ಪ ಇದ್ದೇನೆಂದು ಕಾಮೆಂಟ್ ಮಾಡಿದರೆ ನಾನೇಕೆ ತಲೆ ಕೆಡಿಸಿಕೊಳ್ಳಲಿ. ಅದನ್ನು ಮೀರಲು ನಮ್ಮಲ್ಲಿ ಒಂದು ಪ್ರಜ್ಞೆ ಜಾಗೃತವಾಗಿರಬೇಕು. ಯಾರಪ್ಪನ ಶ್ರಮದಲ್ಲಿ ನಾನು ಬದುಕುತ್ತಿಲ್ಲ ಎಂದು ಅದು ಎಚ್ಚರಿಸುತ್ತಿರಬೇಕು. ಹಾಗಿದ್ದರೆ ಯಾವುದಕ್ಕೂ ಹೆದರುವ, ನಾಚುವ ಸಂದರ್ಭ ಬರುವುದೇ ಇಲ್ಲ. ಗಂಡು ಜಗತ್ತು ಕಟ್ಟುಪಾಡುಗಳನ್ನು ಹಾಕಿ ಅಂತಹ ನೀತಿ ನಿಯಮಗಳನ್ನು ರೂಪಿಸುತ್ತದೆ.

■ ರಾಘವೇಂದ್ರ ಕೆ.